# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

## ಸಿ.ಸಿ. ನಂ.144/2019

| | | |
|---|---|---|
| ಸಾಕ್ಷಿದಾರರ ಹೆಸರು | ಃ ಶಿವಬಸಪ್ಪ | ಚಾಸಾ ಃ 01 |
| ತಂದೆ ಹೆಸರು | ಃ ಬಸಪ್ಪಗೌಡ | ಪ್ರಾಸಾ ಃ 01 |
| ವಯಸ್ಸು | ಃ 38 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಕೂಡ್ಲಗಿ | |

**ಸಾಕ್ಷಿಗೆ ಇಂದು ದಿನಾಂಕಃ 23.03.2026 ರಂದು ಪ್ರಮಾಣ ವಚನ ಭೋಧಿಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-2 ಮತ್ತು 3 ರವರ ಪರಿಚಯ ಇದೆ. ಚಾಸಾ-4 ನನ್ನ ಅಣ್ಣ, ಚಾಸಾ-5 ಮತ್ತು 6 ನನ್ನ ಸಂಬಂಧಿಕರು. ಆರೋಪಿತರು ನನಗೆ ಸಂಬಂಧಿಕರು ಆಗಬೇಕು. ಈಗ 03-04-2014 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ಕೂಡ್ಲಿಗಯ ಬಸವರಾಜ ಗ್ಯಾರೇಜ್ ಹತ್ತಿರ ನಮಗೂ ಮತ್ತು ಆರೋಪಿತರಿಗೂ ಜಗಳವಾಗಿರುತ್ತದೆ. ಆರೋಪಿತರೆಲ್ಲರೂ ಸೇರಿ ನೀರು ಬಂದ್ ಮಾಡಿದ ವಿಷಯದ ಸಲುವಾಗಿ ನನ್ನ ಅಣ್ಣನಾದ ಚಾಸಾ-4 ರವರಿಗೆ ಹೊಡೆದಿರುತ್ತಾರೆ. 1 ನೇ ಆರೋಪಿತನು ಕಲ್ಲಿನಿಂದ ನನ್ನ ಅಣ್ಣನ ಎದೆಗೆ ಹೊಡೆದಿರುತ್ತಾನೆ. ಉಳಿದ ಆರೋಪಿತರು ಕೈಯಿಂದ ಹೊಡಿಬಡಿ ಮಾಡಿರುತ್ತಾರೆ. ಆಗ ನಾನು ಬಿಡಿಸಲು ಬಂದಿದ್ದು ನನಗೂ ಸಹ ದಬ್ಬಿರುತ್ತಾರೆ. ಆಗ ಚಾಸಾ-4 ಮತ್ತು 5 ರವರು ಬಂದು ಜಗಳ ಬಿಡಿಸಿರುತ್ತಾರೆ. ಆರೋಪಿತರು ಇಷ್ಟಕ್ಕೆ ನಿಮ್ಮನ್ನು ಬಿಡುವುದಿಲ್ಲ ಖಲಾಸ್ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಸೂಳೆ ಮಗನೆ, ರಂಡಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಾವು ಕೆಂಭಾವಿಯ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ಕೆಂಭಾವಿ ಪೋಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-(ಎ) ಎಂದು ಗುರುತಿಸಲಾಯಿತು.

**02.** ದಿನಾಂಕ 03-04-2016 ರಂದು ಪೋಲೀಸರು ಮದ್ಯಾಹ್ನ 1 ರಿಂದ 2 ಗಂಟೆ ಅವಧಿದಯಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಒಂದು ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ಗುರುತಿಸಿರುತ್ತೇನೆ. ಅದನ್ನು ಎಂ.ಓ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀಮತಿ ಎಸ್ ಎಂ ಪಿ ವಕೀಲರಿಂದಃ**

ನಾವು ಮತ್ತು ಆರೋಪಿತರು ಅಣ್ಣ-ತಮ್ಮಂದಿರು ಆಗಬೇಕು ಎಂದರೆ ಸರಿ. ನಮ್ಮ ಮತ್ತು ಆರೋಪಿತರ ಜಮೀನುಗಳು ಹೊಂದಿಕೊಂಡಿರುತ್ತಾವೆ ಎಂದರೆ ಸರಿ. ದಾರಿ ಹಾಗೂ ನೀರಿನ ಸಲುವಾಗಿ ಆರೋಪಿತರಿಗೂ ಮತ್ತು ನಮಗೂ ಮೊದಲಿನಿಂದಲೂ ಜಗಳ ಇರುತ್ತದೆ ಎಂದರೆ ಸರಿ. ಅದೇರೀತಿ ಆರೋಪಿತರು ಒಂದೆರಡು ಕೇಸು ನಮ್ಮ ಮೇಲೆ ಮತ್ತು ನಾವು ಅವರ ಮೇಲೆ ಮಾಡಿರುತ್ತೇವೆ ಎಂದರೆ ಸರಿ. ದಾರಿ ಹಾಗೂ ನೀರಿಗೆ ಸಂಬಂಧಿಸಿದಂತೆ ನಮಗೂ ಮತ್ತು ಆರೋಪಿತರಿಗೂ ಜಗಳವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನಗೆ ಸಂಬಂಧಿಸಿದಂತೆ ಜಗಳವಾಗಿದೆ ಎಂದು ನುಡಿಯುತ್ತಾರೆ. ಬಸವರಾಜಪ್ಪ ಗ್ಯಾರೇಜ್ ಮತ್ತು ಕೂಡ್ಲಿಗೆಪ್ಪನ ಗುಡಿಗೂ ಬಹಳ ದೂರ ಇರುತ್ತದೆ ಎಂದರೆ ನಿಜ. ಆರೋಪಿತರ ಮನೆಗಳು ದೂರ ಇರುತ್ತವೆ ಎಂದರೆ ನಿಜ. ಗ್ಯಾರೇಜ್ ಸುತ್ತಮುತ್ತಲು ನಮ್ಮ ಅಣ್ಣನಾದ ಚಾಸಾ-4 ಮಾತ್ರ ಇದ್ದನು. ಆರೋಪಿತರು ಗ್ಯಾರೇಜ್ ಹೊರಗೆ ನಮ್ಮ ಅಣ್ಣನಾದ ಚಾಸಾ-4 ರವರಿಗೆ ಹೊಡೆಯುತ್ತಿದ್ದರು. ನಾನು ಬರುವುದಕ್ಕಿಂತ ಮುಂಚೆ ಅಲ್ಲಿ ಏನು ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಘಟನೆ ಆಗುವ ಹಿಂದಿನ ದಿನ ಜಗಳವಾಗಿತ್ತು ಎಂದು ನುಡಿಯುತ್ತಾರೆ. ಆರೋಪಿತರ ಮನೆಯ ಮುಂದೆ ಚರಂಡಿ ಬಂದ್ ಮಾಡುವಾಗ ಜಗಳವಾಗಿರುತ್ತದೆ. ಆ ಸಮಯದಲ್ಲಿ ನಾನು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಊರಿನಲ್ಲಿ ಆರೋಪಿತರು ಅವರ ಜನರನ್ನು ಕರೆಯಿಸಿರುತ್ತಾರೆ ಮತ್ತು ನಾವು ನಮ್ಮ ಜನರನ್ನು ಕರೆಯಿಸಿ ಪಂಚಾಯತಿ ಮಾಡಿರುತ್ತೇನೆ. ಇಂಜಿನ ಹಚ್ಚಬೇಡರಿ ಅಂತಾ ಯಾವಾಗ ಜಗಳವಾಡಿರುತ್ತೀರಿ ಎಂದರೆ ಸಾಕ್ಷಿಯು ನೀರು ನಮ್ಮ ಹೊಲದಲ್ಲಿ ಇರುತ್ತದೆ ಅದಕ್ಕೆ ಇಂಜಿನ್ ಹಚ್ಚಬೇಡಿರಿ ಎಂದು ಹೇಳಿದಾಗ ಜಗಳವಾಗಿರುತ್ತದೆ ಎಂದು ನುಡಿಯುತ್ತಾರೆ. ಹಳ್ಳದಿಂದ ಯಾರೂ ನೀರನ್ನು ತೆಗೆದುಕೊಳ್ಳುವುದಿಲ್ಲ. ನಮ್ಮ ತಂದೆ-ತಾಯಿ ಮತ್ತು ಅವರ ತಂದೆ-ತಾಯಿ ನಮ್ಮ ಹೊಲದಲ್ಲಿ ಹಳ್ಳ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಿರಿಯರ ಕಾಲದಿಂದ ಸದರಿ ಹಳ್ಳ ನಮ್ಮ ಹೊಲದಲ್ಲೆ ಇರುತ್ತದೆ. ಆರೋಪಿತರು ನನ್ನ

ಅಣ್ಣನಿಗೆ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಅಣ್ಣನಿಗೆ ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ-4 ಮತ್ತು 5 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

02. ದೂರನ್ನು ಕೊಡಲು ನಾನು ಮತ್ತು ನನ್ನ ಅಣ್ಣ ಹೋಗಿರುತ್ತೇವೆ. ದೂರನ್ನು ನಾನು ಹೇಳಿದ ಮೇರೆಗೆ ಪೋಲೀಸರು ಬರೆದುಕೊಂಡಿರುತ್ತಾರೆ. ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ರೀತಿ ಜಗಳವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಹೊಲದಲ್ಲಿನ ನೀರು ತೆಗೆದುಕೊಂಡು ತಮ್ಮ ಹೊಲದಲ್ಲಿ ಹಾದು ಹೋಗಲು ದಾರಿ ಕೊಡದೇ ಇರುವ ಕಾರಣ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ದಾರಿ ಕೊಡದೇ ಇರುವ ಕಾರಣ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದರೆ ತಾವಾಗಿಯೇ ದಾರಿ ಬಿಟ್ಟುಕೊಡುತ್ತಾನೆ ಎಂದು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವ ಬೇದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.